**<u>ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಹೆಚ್ ಕೆ ವಕೀಲರಿಂದಃ-</u>**

1. ನಾನು 10ನೇ ತರಗತಿ ಅನುತ್ತೀರ್ಣ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಹೂಡಲು ವಕೀಲರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಮಾಹಿತಿ ನೀಡಿರುತ್ತೇನೆ ಎನ್ನುತ್ತಾರೆ. ದಾವೆಯನ್ನು ನನ್ನ ತಂದೆಯ ಹೆಸರಿನಲ್ಲಿ ಹೂಡಿಸಿದ್ದೇನೆ. ದಾವಾ ಸ್ವತ್ತು ತಮ್ಮ ತಂದೆಗೆ ಹೇಗೆ ಬಂದಿತ್ತು ಎಂದರೆ ಸಾಕ್ಷಿ ಖರೀದಿ ಮೂಲಕ ಎನ್ನುತ್ತಾರೆ. ದಾವಾ ಸ್ವತ್ತನ್ನು ತಮ್ಮ ತಂದೆ ಯಾರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ತಿಟ್ಟಮಾರನಹಳ್ಳಿಯ ಪುಟ್ಟಸ್ವಾಮಿಗೌಡರಿಂದ 1986ರಲ್ಲಿ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಸದರಿ ತಿಟ್ಟಮಾರನಹಳ್ಳಿಯ ಪುಟ್ಟಸ್ವಾಮಿಗೌಡರವರಿಗೆ ದಾವಾ ಆಸ್ತಿ ಹೇಗೆ ಬಂದಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ತಿಟ್ಟಮಾರನಹಳ್ಳಿಯ ಪುಟ್ಟಸ್ವಾಮಿಗೌಡ ಎಷ್ಟು ಸರ್ವೇ ನಂಬರ್ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಎರಡು ಆಸ್ತಿಗಳು ಅವುಗಳೆಂದರೆ ಸನಂ.400/10, 400/11 ಎನ್ನುತ್ತಾರೆ. ಸದರಿ ಎರಡು ಸರ್ವೇ ನಂಬರ್ ಆಸ್ತಿಗಳನ್ನು ನನ್ನ ತಂದೆ ತಿಟ್ಟಮಾರನಹಳ್ಳಿಯ ಪುಟ್ಟಸ್ವಾಮಿಗೌಡರವರಿಗೆ 1983ರಲ್ಲಿ ಮಾರಾಟ ಮಾಡಿದ್ದರು ಎಂದರೆ ಸರಿ.

2. ಸದರಿ ಎರಡು ಸರ್ವೇ ನಂಬರ್ ಆಸ್ತಿಗಳು ಮೂಲತಃ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ನಮ್ಮ ಕುಟುಂಬಕ್ಕೆ ಸೇರಿದ್ದು ಎನ್ನುತ್ತಾರೆ. ಪ್ರತಿವಾದಿಯ ತಂದೆ ಯಾರ ಮಗ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸನಂ.400/10 ಮತ್ತು ದಾವಾ ಸರ್ವೇ ನಂಬರ್ ಆಸ್ತಿಯು ನನ್ನ ತಂದೆ ದೊಡ್ಡೊನು ಮತ್ತು ಪ್ರತಿವಾದಿ ಕಟ್ಟಯ್ಯ ಇಬ್ಬರಿಗೂ ಸೇರಿದ ಆಸ್ತಿಗಳು

ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ ಆಸ್ತಿಯಲ್ಲಿ ಪ್ರತಿವಾದಿಗೂ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿಯಲ್ಲ. ನನ್ನ ತಾತನ ಹೆಸರು ಕಟ್ಟಯ್ಯ. ನನ್ನ ತಾತ ಹೆಬ್ಬೆಟ್ಟಿನ ಸಹಿ ಮಾಡುತ್ತಿದ್ದರು. ನನ್ನ ತಾತ ಕಟ್ಟಯ್ಯ ಮತ್ತು ಪ್ರತಿವಾದಿಯ ತಂದೆ ಯಳವಯ್ಯ ರವರ ನಡುವೆ ಪಾಲು ಪಾರಿಖತ್ ಆಗಿತ್ತು ಎಂದರೆ ಸರಿಯಲ್ಲ. ಪಂಚಾಯಿತಿ ಪಾಲು ಪಾರಿಖತಿನಂತೆ ಸನಂ.400/10 ನನ್ನ ತಾತ ಕಟ್ಟಯ್ಯನ ಪಾಲಿಗೆ ಬಂದ ಆಸ್ತಿ ಮತ್ತು ದಾವಾ ಆಸ್ತಿ ಸರ್ವೇ ನಂ.400/11 ಪ್ರತಿವಾದಿಯ ತಂದೆ ಯಳವಯ್ಯರವರ ಪಾಲಿಗೆ ಬಂದಂತಹ ಆಸ್ತಿ ಎಂದರೆ ಸರಿಯಲ್ಲ.

3. ಪಂಚಾಯಿತಿ ಪಾಲು ಪಾರಿಖತ್ 1972ರ ಇಸವಿಯಲ್ಲಿ ಆಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಪ್ರಸ್ತುತ ಶೇಷಾದ್ರಿ ಎಂಬುವವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ನಿಂಗಮ್ಮನಿಗೆ ಸೇರಿದ ಜಮೀನು, ದಕ್ಷಿಣಕ್ಕೆ ಹಳ್ಳ ಎನ್ನುಇತ್ತಾರೆ. ಸದರಿ ಚೆಕ್ಕುಬಂದಿ ಆಸ್ತಿಯಲ್ಲಿ ಪ್ರತಿವಾದಿಯರು ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ ನಾವೇ ಸ್ವಾಧೀನ ಇದ್ದಾರೆ ಎನ್ನುತ್ತಾರೆ. ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನನ್ನ ತಂದೆ ಮೂಲಕ ಸುಳ್ಳು ದಾವೆ ಮಾಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ